# ದೈತ್ಯ ವಿಂಡೀಸ್

## ಚುಟುಕು ಕ್ರಿಕೆಟ್ ಚಾಂಪಿಯನ್‌ಗಳ ಕಾರ್ಖಾನೆ

ಟೆಸ್ಟ್ ಕ್ರಿಕೆಟ್‌ನಲ್ಲಿ ಎಳಸಿನಂತೆ ಕಾಣಿಸುತ್ತಿರಬಹುದು. ಏಕದಿನ ಕ್ರಿಕೆಟ್‌ನಲ್ಲಿ ಯಶಸ್ಸು ಕಾಣದಿರಬಹುದು. ಆದರೆ, ಚುಟುಕು ಕ್ರಿಕೆಟ್‌ನಲ್ಲಿ ವೆಸ್ಟ್‌ಇಂಡೀಸ್ ಈಗಲೂ ಚಾಂಪಿಯನ್‌ಗಳ ಆಡುಂಬೊಲ.

■ ವಿಶಾಖ ಎನ್.



ಹಾರ್ದಿಕ್ ಪಾಂಡ್ಯ ನೇತೃತ್ವದ ಭಾರತ ತಂಡದಿಂದ ಇತ್ತೀಚಿನ ಟಿ–20 ಸರಣಿ ಕಿತ್ತುಕೊಂಡ ಕಿಂಗ್!

ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣ ಖಚಾಖಚಿ ತುಂಬಿತ್ತು. ಭಾರತ ತಂಡ ಕಣದಲ್ಲಿ ಇರಲಿಲ್ಲ. ಒಂದು ಕಡೆ ಇಂಗ್ಲೆಂಡ್. ಇನ್ನೊಂದೆಡೆ ವಿಂಡೀಸ್. ಕೊನೆಯ ಓವರ್. ಉಗುರು ಕಚ್ಚುವ ಸಮಯ. ವಿಂಡೀಸ್‌ಗೆ ಗೆಲ್ಲಲು 19 ರನ್‌ಗಳು ಬೇಕಿದ್ದವು. ಬೆನ್ ಸ್ಟೋಕ್ಸ್ ಚೆಂಡನ್ನು ಕೈಗೆತ್ತಿಕೊಂಡರು. ಮೊದಲ ಎಸೆತವನ್ನು ಲೆಗ್‌ಸೈಡ್‌ನತ್ತ ಹಾಕಿದರು. ಹೇಳಿಕೇಳಿ ಹಾಫ್ ವಾಲಿ. ಬ್ಯಾಟ್ ಹಿಡಿದು ನಿಂತಿದ್ದ ದೈತ್ಯ ಕ್ರೇಗ್ ಬ್ರಾಥ್‌ವೈಟ್ ಚೆಂಡನ್ನು ಸಿಕ್ಸರ್‌ಗೆ ಅಟ್ಟುವುದು ಕಷ್ಟವಾಗಲಿಲ್ಲ. ಎರಡನೇ ಎಸೆತದಲ್ಲಿ ಅಷ್ಟೇನೂ ಲೋಪವಿರಲಿಲ್ಲ. ಅದು ಫುಲ್ ಲೆಂಗ್ತ್ ಎಸೆತ ಕೂಡ ಆಗಿರಲಿಲ್ಲ. ಆದರೂ ಬ್ರಾಥ್‌ವೈಟ್ ಲಾಂಗ್‌ಆನ್‌ನತ್ತ ಎತ್ತಿ ಹೊಡೆದರು. ಅದೂ ಸಿಕ್ಸರ್. ಸ್ಟೋಕ್ಸ್ ಬಿಟ್ಟ ಕಣ್ಣು ಬಿಟ್ಟಹಾಗಾಯಿತು. ಮೂರನೇ ಎಸೆತ ಮಿಸ್‌ಹಿಟ್. ಆದರೂ ಲಾಂಗ್‌ಆಫ್‌ನತ್ತ ಇನ್ನೊಂದು ಸಿಕ್ಸರ್‌ಗೆ ನುಗ್ಗಿತು. ನಾಲ್ಕನೇ ಎಸೆತವೂ ಸಿಕ್ಸರ್. ಅಲ್ಲಿಗೆ ಸ್ಟೋಕ್ಸ್ ತಮ್ಮ ಕುಸಿದ ಕಾಲುಗಳ ಭೂಮಿಗಿಳಿಸಿ, ಕುಕ್ಕರುಗಾಲಲ್ಲಿ ಕೂತು ಮುಖ ಒರೆಸಿಕೊಂಡರು. ವಿಂಡೀಸ್ ಪಾಲಿಗೆ ಬ್ರಾಥ್‌ವೈಟ್ ಹೀರೊ ಆಗಿದ್ದರು. ವೆಸ್ಟ್‌ಇಂಡೀಸ್ ಎರಡನೇ ಸಲ ಟ್ವೆಂಟಿ20 ವಿಶ್ವ ಚಾಂಪಿಯನ್ ಆಗಿತ್ತು.

2016ರ ಆ ಪಂದ್ಯವನ್ನು ರಿವೈಂಡ್ ಮಾಡಿಕೊಂಡು ಮತ್ತೆ ಮತ್ತೆ ನೋಡಬೇಕು. ಒಂದು ಕಡೆ ಗಟ್ಟಿಯಾಗಿ ಲಂಗರು ಹಾಕಿ ನಿಂತಿದ್ದ ಮರ್ಲಾನ್ ಸ್ಯಾಮ್ಯುಯೆಲ್ಸ್ ನಡೆದು ಬಂದು, ಇನ್ನೊಂದು ಕಡೆ ನಿಂತಿದ್ದ ಅನುಭವ ಕಡಿಮೆ ಇದ್ದ ಬ್ರಾಥ್‌ವೈಟ್‌ಗೆ, ‘ಚೆಂಡನ್ನು ಬೆಟ್ಟದ ತಪ್ಪಲಿಗೆ ಎತ್ತಿ ಹೊಡೆ’ ಎಂದು ಉಸುರಿದ ಪರಿಣಾಮ ಅಷ್ಟರಮಟ್ಟಿಗೆ ಇತ್ತು.

ಆ ವಿಶ್ವಕಪ್ ಗೆದ್ದು ಏಳು ವರ್ಷಗಳು ಉರುಳಿವೆ. ಆಗಸ್ಟ್ 13ಕ್ಕೆ ಮುಗಿದ ಟ್ವೆಂಟಿ20 ಕ್ರಿಕೆಟ್ ಸರಣಿಯಲ್ಲಿ ವೆಸ್ಟ್‌ಇಂಡೀಸ್ 3–2ರಲ್ಲಿ ಭಾರತವನ್ನು ಸೋಲಿಸಿದಾಗ, ಬ್ರಾಥ್‌ವೈಟ್ ಹೊಡೆದ ಆ ಸಿಕ್ಸರ್‌ಗಳು ಮತ್ತೆ ನೆನಪಾದವು. ಯಶಸ್ವಿ ಜೈಸ್ವಾಲ್ ಎಸೆತವೊಂದನ್ನು ಶಾಯ್ ಹೋಪ್ ಸಿಕ್ಸರ್‌ಗೆ ಎತ್ತಿ ಸರಣಿ ಗೆಲುವನ್ನು ತಂದಿತ್ತಾಗ, ಇನ್ನೊಂದು ತುದಿಯಲ್ಲಿ ಬ್ರೆಂಡನ್ ಕಿಂಗ್ ಹಲ್ಲುಗಳು ನಗುವಿಗೆ ಅರ್ಥ ದಕ್ಕಿಸಿಕೊಡುವಂತೆ ಫಳಫಳ್ಳೆಂದವು. ಆಗ ಸ್ಯಾಮ್ಯುಯೆಲ್ಸ್ ಹೇಗೆ ಆಡಿದ್ದರೋ ಮೊನ್ನೆ ಕಿಂಗ್ ಹಾಗೆಯೇ ಆಡಿದರು. ಪಂದ್ಯ ಮುಗಿದ ಮೇಲೆ ನಿಕೊಲಸ್ ಪೂರನ್ ತಮ್ಮ ಟಿ–ಶರ್ಟ್ ಅನ್ನು ಮೇಲಕ್ಕೆತ್ತಿ, ಹೊಟ್ಟೆಯ ಭಾಗದ ಮೇಲೊಂದು, ಎಡ ಮೊಣಕೈ ಕೆಳಗಿನ ಇನ್ನೊಂದು ಮಾರ್ಕ್‌ಗಳನ್ನು ತೋರಿಸಿದ ಫೋಟೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಅವೆರಡೂ ಕಿಂಗ್ ಬ್ಯಾಟ್‌ನಿಂದ ಚೆಂಡು ಹೊಮ್ಮಿ ಬಡಿದಿದ್ದರಿಂದ ಮೂಡಿದ್ದ ಮಾರ್ಕ್‌ಗಳಾಗಿದ್ದವು. ಆ ಪಂದ್ಯದಲ್ಲಿ ಕೆಲವೇ ರನ್‌ಗಳಿಂದ ಅರ್ಧಶತಕ ವಂಚಿತರಾದ ಪೂರನ್, ನಾಲ್ಕು ಸಿಕ್ಸರ್‌ಗಳನ್ನು ಹೊಡೆದಿದ್ದರು. ಅಷ್ಟೇ ಅಲ್ಲ, ಐದು ಪಂದ್ಯಗಳಿಂದ ಒಟ್ಟಾರೆ 176 ರನ್ ಕಲೆಹಾಕಿದ್ದರಿಂದ ‘ಸರಣಿ ಶ್ರೇಷ್ಠ’ ಪ್ರಶಸ್ತಿಯೂ ಅವರಿಗೆ ಸಂದಿತು.

ಟ್ವೆಂಟಿ20 ಕ್ರಿಕೆಟ್‌ನಲ್ಲಿ ವೆಸ್ಟ್‌ಇಂಡೀಸ್ ಇಷ್ಟು ಹಿಡಿತ ಸಾಧಿಸಿರುವುದು ಈ ಸಂದರ್ಭದಲ್ಲಿ ವಿಶೇಷ ಎಂದು ಕೆಲವರಿಗೆ ಅನಿಸಲು ಕಾರಣಗಳಿವೆ. ಈ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಆಡುವ ಅರ್ಹತೆಯನ್ನೇ ಪಡೆದುಕೊಳ್ಳಲು ಆಗದ ತಂಡವೊಂದರ ಎದುರು ಜಾಗತಿಕವಾಗಿ ಪ್ರಬಲ ತಂಡವಾದ ಭಾರತ

